

# ರಿಕ್ಸ್ ಮ್ಯೂಸಿಯಂನಲ್ಲಿ ಭಾರತದ ಶಿಲ್ಪ ವೈಭವ

**ರಿಕ್ಸ್ ವಸ್ತುಸಂಗ್ರಹಾಲಯ ನೆದರ್ಲ್ಯಾಂಡ್‌ನ ರಾಷ್ಟ್ರೀಯ ವಸ್ತುಸಂಗ್ರಹಾಲಯ. ಇಲ್ಲಿಯ ಮುಖ್ಯ ಆಕರ್ಷಣೆ ಎಂದರೆ ಭಾರತೀಯ ಶಿಲ್ಪಕಲೆಗಳ ಸಂಗ್ರಹ. ದೇಸೀ ಸೊಗಡೇ ಇಲ್ಲಿ ಮೈತಳೆದಿದೆ.**

ಅದೊಂದು ನೃತ್ಯ ಭಂಗಿಯಲ್ಲಿರುವ ಸುಂದರವಾದ ಶಿವನ ವಿಗ್ರಹ. ಶಿಲ್ಪದ ಸುತ್ತಲೂ ಜ್ವಾಲೆಯ ಮಂಡಲವಿರುವ ಈ ನಟರಾಜನ ತೂಕ ಬರೋಬ್ಬರಿ 300 ಕೆಜಿ. ಸಾವಿರಾರು ವರ್ಷಗಳಷ್ಟು ಹಳೆಯದಾದ ಚೋಳರ ಕಾಲಕ್ಕೆ ಸೇರಿದ ಈ ಅಪೂರ್ವ ಶಿಲ್ಪ ಇರುವುದು ನೆದರ್ಲ್ಯಾಂಡ್‌ನ ರಿಕ್ಸ್ ವಸ್ತುಸಂಗ್ರಹಾಲಯದಲ್ಲಿ. ವಿದೇಶದಲ್ಲಿರುವ ಭಾರತದ ಅತಿ ದೊಡ್ಡ ವಿಗ್ರಹವಿದು.

ಇದರ ಗಾತ್ರ 153 X114.5 ಸೆಂ.ಮೀ. ಇತ್ತೀಚೆಗೆ ಇದರ ಎಕ್ಸ್–ರೇ ಪರೀಕ್ಷೆ ನಡೆಸಿ, ಪಂಚಲೋಹದಿಂದ ಇದನ್ನು ತಯಾರಿಸಲಾಗಿದೆ ಎನ್ನುವುದನ್ನು ಖಚಿತ ಪಡಿಸಿಕೊಳ್ಳಲಾಯಿತು. ಶಿವನ ಪಾದದ ಕೆಳಗಿರುವ ರಾಕ್ಷಸ ಕೂಡಾ ಪಂಚಲೋಹದ್ದು!

ಈ ಹಿಂದೆಯೂ ಈ ವಿಗ್ರಹದ ಪರೀಕ್ಷೆ ನಡೆದಿತ್ತು. ಆದರೆ ಅಗತ್ಯ ಸಲಕರಣೆಗಳಿಲ್ಲದ ಕಾರಣ ಸ್ಪಷ್ಟ ವಿವರ ದೊರೆತಿರಲಿಲ್ಲ. ಈಗ ನಡೆಸಲಾದ ಪರೀಕ್ಷೆಯಲ್ಲಿ ಅತೀ ಉಷ್ಣಾಂಶದ ಡಿಜಿಟಲ್ ರೇಡಿಯೇಷನ್ ಬಳಸಿದ್ದರಿಂದ ಖಚಿತ ವಿವರಗಳನ್ನು ಪಡೆಯಲು ಸಾಧ್ಯವಾಯಿತು. ಈ ರೀತಿಯ ಪರೀಕ್ಷೆ ನಡೆಸಿರುವುದು ಜಗತ್ತಿನಲ್ಲಿ ಇದೇ ಪ್ರಥಮವಂತೆ.



ಚೋಳರ ಆಳ್ವಿಕೆಯ ಅವಧಿಯಾದ 9–12ನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಈ ರೀತಿಯ ವಿಗ್ರಹಗಳು ದೇವಸ್ಥಾನದಲ್ಲಿ ಸಾಮಾನ್ಯವಾಗಿ ಕಂಡುಬರುತ್ತಿದ್ದವು. ಊರಿನ ಜಾತ್ರೆಯ ಸಮಯದಲ್ಲಿ ಇವುಗಳ ಮೆರವಣಿಗೆ ನಡೆಸುತ್ತಿದ್ದರು. ಸ್ಥಳೀಯ ಶಿಲ್ಪಿಗಳನ್ನೇ ಬಳಸಿಕೊಂಡು ಈ ವಿಗ್ರಹವನ್ನು ಕೆತ್ತಿದ್ದಾರೆ ಎನ್ನಲಾಗಿದೆ.

**ಭಾರತದ ಕಲಾಕೃತಿಗಳ ಸಂಗ್ರಹವಿರುವ ಜನಪ್ರಿಯ ವಸ್ತುಸಂಗ್ರಹಾಲಯಗಳು:**

- ಮೆಟ್ರೋಪಾಲಿಟನ್ ಮ್ಯೂಸಿಯಂ ಆಫ್ ಆರ್ಟ್ – ನ್ಯೂಯಾರ್ಕ್
- ಆಕ್ಲೆಂಡ್ ಆರ್ಟ್ ಮ್ಯೂಸಿಯಂ – ಚ್ಯಾಪೆಲ್ ಹಿಲ್
- ಲಾಸ್ ಏಂಜೇಲಿಸ್ ಕೌಂಟಿ ಮ್ಯೂಸಿಯಂ ಆಫ್ ಆರ್ಟ್ – ಕ್ಯಾಲಿಫೋರ್ನಿಯಾ
- ಏಷ್ಯನ್ ಆರ್ಟ್ ಮ್ಯೂಸಿಯಂ – ಸ್ಯಾನ್ ಫ್ರಾನ್ಸಿಸ್ಕೊ, ಕ್ಯಾಲಿಫೋರ್ನಿಯಾ
- ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಆರ್ಕಿಯಾಲಜಿ –ಕೊಲಂಬಿಯ
- ಮಿನ್‌ಗೇಯ್ ಇಂಟರ್‌ನ್ಯಾಷನಲ್ ಮ್ಯೂಸಿಯಂ – ಸಾಂಡಿಯಾಗೊ

ರಿಕ್ಸ್ ವಸ್ತುಸಂಗ್ರಹಾಲಯ ನೆದರ್ಲ್ಯಾಂಡ್‌ನ ರಾಷ್ಟ್ರೀಯ ವಸ್ತುಸಂಗ್ರಹಾಲಯ. ಇಲ್ಲಿಯ ಮುಖ್ಯ ಆಕರ್ಷಣೆ ಎಂದರೆ ಭಾರತೀಯ ಶಿಲ್ಪಕಲೆಗಳ ಸಂಗ್ರಹ. ದೇಸೀ ಸೊಗಡೇ ಇಲ್ಲಿ ಮೈತಳೆದಿದೆ. ಭಾರತದ ಅಮೂಲ್ಯ ಹರಳುಗಳು, ಉಡುಪುಗಳು ಮತ್ತು ಪಂಚಲೋಹದ ಶಿಲ್ಪಗಳು ಇಲ್ಲಿವೆ. ಈ ವಸ್ತುಸಂಗ್ರಹಾಲಯದ ತಳಭಾಗದ ಒಟ್ಟು ಎಂಟು ಕೋಣೆಗಳನ್ನು ಏಷ್ಯಾದ ಕಲೆಗಳಿಗಾಗಿಯೇ ಮೀಸಲಿಡಲಾಗಿದೆ. 15–19ನೇ ಶತಮಾನದಲ್ಲಿ ಭಾರತೀಯ ಚಿತ್ರಕಲೆಯ ಅಭಿವೃದ್ಧಿ ಕುರಿತಂತೆ ಐವತ್ತು ಮೇರುಕೃತಿಗಳೂ ಇಲ್ಲಿವೆ. ಬುದ್ಧನ ಪ್ರತಿಮೆ, ಚಿತ್ರಕಲೆ, ರಾಜರ ಕಾಲದ ರತ್ನಾಭರಣಗಳು ಇಲ್ಲಿಗೆ ಭೇಟಿ ನೀಡುವವರನ್ನು ಆಕರ್ಷಿಸುತ್ತವೆ. ಹಾಗೆ ಕಲಾವಿದೆ ಮಾಲಿನಿ ರಾಯ್ ಅವರ ಕೈಚಳಕದಿಂದ ತಯಾರಾದ ಸುಂದರವಾದ 50 'ಮಿನಿಚರ್'ಗಳು ಇಲ್ಲಿವೆ.

ಭಾರತೀಯ ಕಲಾಕೃತಿಗಳು ಎಂದರೆ ಇಲ್ಲಿಯವರೆಗೆ ಬಲು ಪ್ರೀತಿ. ಹಾಗಾಗಿ ವರ್ಷಕ್ಕೊಮ್ಮೆ ಇವುಗಳ ಪ್ರದರ್ಶನ ನಡೆಯುತ್ತದೆ. ಏನಿಲ್ಲವೆಂದರೂ ವರ್ಷಕ್ಕೆ 9 ಲಕ್ಷ ಕಲಾಪ್ರಿಯರು ಇಲ್ಲಿಗೆ ಭೇಟಿ ನೀಡುತ್ತಾರೆ.

ಇಲ್ಲಿನ ಮತ್ತೊಂದು ವಿಶೇಷವೆಂದರೆ ಈ ಸಂಗ್ರಹದಲ್ಲಿ ಇಂಡೊನೇಷ್ಯಾ, ಭಾರತ, ಚೀನಾ, ಜಪಾನ್‌ನ ಕಲಾಕೃತಿಗಳಿದ್ದು ಇವ್ಯಾವುದನ್ನೂ ಪ್ರತ್ಯೇಕವಾಗಿ ಇಟ್ಟಿಲ್ಲ. ದೇಶಗಳ ವರ್ಗೀಕರಣದ ಬದಲಾಗಿ ಶಿಲ್ಪಕಲೆ, ಚಿತ್ರಕಲೆ ಮತ್ತು ಅಲಂಕಾರಿಕ ಕಲೆಗಳನ್ನಾಗಿ ವರ್ಗೀಕರಿಸಿದ್ದಾರೆ. ಇದರಿಂದಾಗಿ ಕಲಾಪ್ರಿಯರಿಗೆ ವಿವಿಧ ದೇಶಗಳ ಕಲೆಗಳನ್ನು ಹೋಲಿಸಲೂ ಅನುಕೂಲವಾಗಿದೆ. ವಿದೇಶಗಳ ವಸ್ತುಸಂಗ್ರಹಾಲಯಗಳು ಹಿಂದೂ ಶೈಲಿಯ ಶಿಲ್ಪಕಲೆ ಸಂಗ್ರಹಕ್ಕೆ ಹೆಚ್ಚಿನ ಮಹತ್ವ ನೀಡುತ್ತಿವೆ. ಹಿಂದೂ ಶೈಲಿಯ ಕಲೆಗಾಗಿಯೇ ಶಾಶ್ವತ ಸ್ಥಳವನ್ನು ವಸ್ತುಸಂಗ್ರಹಾಲಯಗಳು ಮೀಸಲಿಡುತ್ತಿವೆ. ಮುಂದಿನ ಪೀಳಿಗೆಗೂ ಈ ಕಲೆಗಳ ಬಗ್ಗೆ ಅರಿವನ್ನುಂಟು ಮಾಡಲು ಆಗಾಗ ಪ್ರದರ್ಶನಗಳನ್ನು ಏರ್ಪಡಿಸಲಾಗುತ್ತದೆ ಎನ್ನುತ್ತಾರೆ ಯೂನಿವರ್ಸಲ್ ಹಿಂದೂಯಿಸಂ ಸೊಸೈಟಿಯ ಅಧ್ಯಕ್ಷ ಜೇಡ್. ಮ್ಯೂಸಿಯಂ ಮಾತ್ರವಲ್ಲದೆ ಮನೆಗಳ ಅಲಂಕಾರಕ್ಕೆ ಮತ್ತು ದೇವಸ್ಥಾನಗಳಿಗೆ ಇಲ್ಲಿನ ಶೈಲಿಯಲ್ಲಿಯೇ ವಿಗ್ರಹಗಳ ಕೆತ್ತನೆ ಮಾಡಿಕೊಂಡು ತಮ್ಮ ದೇಶಗಳಿಗೆ ಕೊಂಡೊಯ್ಯುತ್ತಾರೆ.

■ ವಿದ್ಯಾಶ್ರೀ ಎಸ್